## ಜಾಹೀರಾತಿನ ಗುಣಮಟ್ಟ

ಜಾಹೀರಾತುಗಳು ಧಾರಾವಾಹಿಗಳಲ್ಲ. ರಿಯಾಲಿಟಿ ಷೋಗಳೂ ಅಲ್ಲ. ಅವು ಇಪ್ಪತ್ತು ಮೂವತ್ತು ಸೆಕೆಂಡಿನ ತುಣುಕುಗಳು. ಆದರೂ ಅವುಗಳಲ್ಲಿ ಕೆಲವು ತುಂಬ ಆಪ್ತವಾಗುತ್ತವೆ. ಲಲಿತ್ ಜ್ಯುವೆಲ್ಲರಿ 'ಹಾ ಎನ್ನಮ್ಮ ಎನ್ನುವ ತಂಗಿ ಅಣ್ಣನ ಪರವಾಗಿ ವಧುವಿಗೆ ಒಪ್ಪಿಗೆ ಕೊಡುವ ಜಾಹೀರಾತು ಹೀಗೆ ಕೆಲವು ವೀಕ್ಷಕರು ನೋಡುವಂತೆ ಇರುತ್ತವೆ. ಇವುಗಳಿಂದ ಧಾರಾವಾಹಿಗಳ ಹಳಸು ತನಕ್ಕೆ ಬೇಸತ್ತವರಿಗೆ ಒಂದು ರೀತಿ ಮಧ್ಯ ಮಧ್ಯ ರಿಲೀಫ್. ಅವುಗಳಲ್ಲಿ ಅತ್ಯಂತ ಕಿರಿಕಿರಿ ಉಂಟು ಮಾಡುವ ಕೆಲವು ಜಾಹೀರಾತು ಇರುತ್ತವೆ. ಉದಾಹರಣೆ ಎಂದರೆ ರಮ್ಮಿ ಆಟದ ತಲೆನೋವಿನ ಜಾಹೀರಾತು.

—ಸತ್ಯಬೋಧ ಬೆಂಗಳೂರು.

## ಇದೆಂತಹ ವಿಚಿತ್ರ

ಕಲರ್ಸ್ ಸೂಪರ್‌ನ 'ಮಾಂಗಲ್ಯಂ ತಂತುನಾನೇನ' ಧಾರಾವಾಹಿಯಲ್ಲಿ ನಾಯಕ ನಾಯಕಿಯನ್ನು ಆಚೆ ಕರೆದುಕೊಂಡು ಹೋಗಲು ತಯಾರಿ ಮಾಡಿಕೊಂಡಿರುತ್ತಾನೆ. ಅಷ್ಟರಲ್ಲಿ ಅವನ ಪ್ರೇಯಸಿ ನಾಯಕಿಯನ್ನು ತಪ್ಪಿಸಿ ತಾನು ಅವನ ಜೊತೆ ಹೋಗುತ್ತಾಳೆ. ಹೋಗಿಬಂದ ಮೇಲೆ ಮನೆಯ ಒಳಗೆ ಹೋಗುವ ಮುನ್ನ ನಾಯಕ ಅವನ ಶೂ ಅನ್ನು ಅಲ್ಲಿರುವ ನಾಯಕಿಯ ಚಪ್ಪಲಿ ಪಕ್ಕ ಬಿಡುತ್ತಾನೆ ಅದನ್ನು ಗಮನಿಸಿ ಅವನ ಪ್ರೇಯಸಿ ಅದನ್ನು ಅಲ್ಲಿಂದ ತೆಗಿಸಿ ತನ್ನ ಚಪ್ಪಲಿಯ ಜೊತೆ ನಾಯಕನ ಶೂ ಸೇರಿಸಿ ಇಟ್ಟು ನಾಯಕಿಯ ಚಪ್ಪಲಿಯನ್ನು ದೂರ ಇಟ್ಟು ಮನೆಯ ಒಳಗೆ ಹೋಗುತ್ತಾಳೆ, ವಿಷಯ ಅದಲ್ಲ ಇಲ್ಲಿಯವರೆಗೆ ನಾನು ಹೇಳಿದ್ದು ಅಂದಿನ ಕಂತಿನ ಸನ್ನಿವೇಶ. ಅವಳು ಹೋದ ನಂತರ ನಾಯಕನ ಮನಸ್ಸು ಕಣ್ಣೀರಿಟ್ಟು ಪ್ರೇಯಸಿಯ ಚಪ್ಪಲಿ ಬದಿಗಿಟ್ಟು ನಾಯಕಿಯ ಚಪ್ಪಲಿಯನ್ನು ತನ್ನ ಶೂ ಜೊತೆ ಇಟ್ಟು ನಾಯಕಿಗೆ ಮನಸ್ಸಿನಲ್ಲೇ ಕ್ಷಮೆ ಕೇಳಿ ಒಳಗೆ ಹೋಗುತ್ತಾನೆ. ಅಲ್ಲಿಗೆ ನಾಯಕಿಯ ನಾಯಕನೊಂದಿಗೆ ಪ್ರೇಮ ಚಪ್ಪಲಿಗಿಂತ ಕಡೆ ಅನ್ನುವಂತೆ ಆಯಿತು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು.

ವಾರದ ಪತ್ರ

## ಡ್ರಾಮಾದಲ್ಲಿ ಸಂಸ್ಕೃತಿ ಬಿಂಬ

ಝೀ ಕನ್ನಡದ 'ಡ್ರಾಮಾ ಜೂನಿಯರ್' ಸಿಸನ್ —3 ಮುಕ್ತಾಯಗೊಂಡಿದೆ. ಸುಮಾರು 5 ತಿಂಗಳು ಕಾಲ ಪ್ರೇಕ್ಷಕರ ಮನ ಗೆದ್ದ ಮಕ್ಕಳು ಅಭಿನಯಿಸುತ್ತಿರುವ ಕಿರು ನಾಟಕಗಳು ಜನರ ಮನಸ್ಸನ್ನು ಸೂರೆಗೈದಿದ್ದವು. ಈ ಬಾರಿ ಆಯ್ಕೆಯಾದ ಮಕ್ಕಳು ಬಹಳ ಕಿರಿಯ ವಯಸ್ಸಿನವರು. ಆದರೆ ನಟನೆಯ ವಿಷಯ ಬಂದಾಗ ಹಿರಿಯರನ್ನು ಮೀರಿಸುವ ಸಾಮರ್ಥ್ಯವನ್ನು ಹೊಂದಿದ್ದರು.

ಡ್ರಾಮಾ ಜೂನಿಯರ್ ಸೀಜನ್—3 ಎರಡು ವಿಶೇಷತೆಗಳಿಂದ ಕೂಡಿತ್ತೆಂದು ಹೇಳಬಹುದು. ಒಂದು ಮಕ್ಕಳ ಪಠ್ಯಪುಸ್ತಕಗಳಲ್ಲಿ ಇರುವ ಕೆಲ ಪಾಠಗಳನ್ನು ಆಯ್ಕೆಮಾಡಿಕೊಂಡು ನಾಟಕ ರೂಪದಲ್ಲಿ ಪ್ರಸ್ತುತಪಡಿಸಿದ್ದು, ಇನ್ನೊಂದು ಕನ್ನಡ ನಾಡಿನಲ್ಲಿ ಎಲೆಮರೆಯ ಕಾಯಿಯಂತೆ ಬದುಕಿ ಸಮಾಜಕ್ಕೆ ತಮ್ಮದೇ ಕೊಡುಗೆಯನ್ನು ನೀಡುತ್ತಿರುವ ಸಾಧಕರ ಚರಿತ್ರೆಯನ್ನು ನಾಟಕಕ್ಕೆ ಅಳವಡಿಸಿ ಮಕ್ಕಳಿಂದ ಆ ಸಾಧಕರ ಮುಂದೆಯೇ ನಾಟಕವನ್ನು ಆಡಿಸಿ ತೋರಿಸಿದ್ದು, ಮಕ್ಕಳಲ್ಲಿ ಹುದುಗಿದ ನಟನಾ ಕೌಶಲ್ಯವನ್ನು ಗುರುತಿಸಿ ಅದನ್ನು ಪೋಷಿಸುವ ಕಾರ್ಯದ ಜೊತೆ ಆರೋಗ್ಯಕರ ಮನರಂಜನೆಯನ್ನು ನೀಡಿದ ಈ ಕಾರ್ಯಕ್ರಮ, ಭಾರತೀಯ ಸಂಸ್ಕೃತಿಯ ಪ್ರತಿಬಿಂಬಗಳನ್ನು, ರಾಮಾಯಣ, ಮಹಾಭಾರತ ಮಹಾಕೃತಿಗಳ ಮಹತ್ವದ ಘಟನೆಗಳನ್ನು ಪರಿಚಯಿಸುವ ಕಾರ್ಯವನ್ನು ಮಾಡಿದೆ. ಅದರಲ್ಲೂ ಕರುನಾಡಿನ ಅನೇಕ ಜನಪದ ಕಲೆಗಳನ್ನು ಅಂದರೆ ದೊಡ್ಡಾಟ, ಕರಾವಳಿಯ ಯಕ್ಷಗಾನ ಹೀಗೆ ಹಲವು ಉತ್ತಮ ಪ್ರಕಾರಗಳನ್ನು ಪರಿಚಯಿಸಿದ್ದು ಆಪ್ಯಾಯಮಾನವಾಗಿತ್ತು. ದ್ವಂದ್ವಾರ್ಥ ಮತ್ತು ನಗು ಬರಿಸಲು ಮಾಡುವ ವಿಚಿತ್ರ ಅಂಗಚೇಷ್ಟೆಗಳಿಂದ ದೂರ ಇರುವ ಈ ಸೀಜನ್ 3 ಕುಟುಂಬದ ಎಲ್ಲ ಸದಸ್ಯರು ಕುಳಿತು ಆನಂದಿಸುವಂತಿದ್ದವು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಸ್ಮರಣೆ ಇರಬೇಕು

ಇತ್ತೀಚೆಗೆ ಕಿರುತೆರೆಯ ಬಹುತೇಕ ಧಾರಾವಾಹಿಗಳಲ್ಲಿ ಇಂದಿನ ಕನ್ನಡದ ಹಿಟ್ ಚಿತ್ರಗೀತೆಗಳನ್ನು ನೇರವಾಗಿ ಕದ್ದು ಅಳವಡಿಸಿಕೊಳ್ಳುವ ಕೆಟ್ಟ ಚಾಳಿ ಚಾಲ್ತಿಯಲ್ಲಿದೆ. 'ರಾಧಾರಮಣ', 'ರಾಜಾರಾಣಿ', 'ಅಗ್ನಿಸಾಕ್ಷಿ', 'ಜೋಡಿಹಕ್ಕಿ' ಸೇರಿದಂತೆ ಹಲವು ಧಾರಾವಾಹಿಗಳ ಮಧ್ಯ ಸನ್ನಿವೇಶಕ್ಕೆ ತಕ್ಕಂತೆ ಇನ್‌ಸ್ಟಂಟ್ ಚಿತ್ರಗೀತೆಗಳನ್ನು ತುರುಕಲಾಗುತ್ತದೆ. ಇದರಿಂದ ಆ ಧಾರಾವಾಹಿಗಳ ಸಂಗೀತ ನಿರ್ದೇಶಕರಿಗೆ ಕೆಲಸ ಸುಲಲಿತವಾದರೂ ಶ್ರಮವಹಿಸಿ ರಾಗ ಜೋಡಿಸಿದ ಮೂಲ ಸಂಗೀತ ನಿರ್ದೇಶಕರಿಗೆ ರಫ್ ಎಂದು ಕೆನ್ನೆಗೆ ಬಾರಿಸಿದಂತಾಗುವುದು ಖಂಡಿತ. ಕಾಪಿರೈಟ್ ಪ್ರಕಾರ ಮೂಲ ನಿರ್ಮಾತೃ ಹಾಗೂ ಸಂಗೀತ ನಿರ್ದೇಶಕರ ಒಪ್ಪಿಗೆಪತ್ರ ಪಡೆಯದೇ ಅಳವಡಿಸಿಕೊಳ್ಳುವುದು ಅಪರಾಧ. ಇದು ಯಾರದೋ ಉಸಿರು, ಯಾರದೋ ಹೆಸರು ಎಂಬಂತಾಗುತ್ತದೆ!.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ

## ಹಾಸ್ಯಾಸ್ಪದ

ನಮ್ಮ ಟೀವಿ ವಾಹಿನಿಗಳಲ್ಲಿನ ಬಹುಪಾಲಿನ ಕಾರ್ಯಕ್ರಮಗಳು ಹಾಸ್ಯಾಸ್ಪದವಾಗಿರುತ್ತವೆ. ಧಾರಾವಾಹಿಗಳಲ್ಲಿ ಬರುವ ಗಂಡು ಶಿಖಾಮಣಿಗಳ ಅವಸ್ಥೆ ಹೇಳತೀರದು. ವಿವಿಧ ರೀತಿಯ ಗಡ್ಡದ ಅಲಂಕಾರದಿಂದ ಮಾತ್ರ ಅವರನ್ನು ಗಂಡು ಜಾತಿಗೆ ಸೇರಿಸಬಹುದು. ಇಲ್ಲಿನ ಬಹುಪಾಲು ಹೆಣ್ಣಿನದೇ ದರ್ಬಾರ್. ಹೆಣ್ಮಕ್ಕಳೇ ಸ್ಟ್ರಾಂಗು ಗುರು ಎಂದು ಹೇಳಿಕೊಂಡೇ ಅವರನ್ನು ವಿಕಾರವಾಗಿ ಚಿತ್ರಿಸಿರುತ್ತಾರೆ. ಕೆಲವು ಪಾತ್ರಧಾರಿಗಳು ಡಾನ್‌ಗಳು ಇನ್ನೂ ಕೆಲವು ಅಳುಮುಂಜಿಗಳು. ಈ ಸ್ತ್ರೀ ಪಾತ್ರಧಾರಿಗಳು ಸದಾ ಸರ್ವಾಲಂಕಾರಭೂಷಿತರು. ಸುಖವಿರಲಿ, ದುಃಖವಿರಲಿ ಅವರ ಮೇಕಪ್ ಮಾತ್ರ ಅಳಿಸುವುದಿಲ್ಲ. ಅವರು ಧರಿಸಿರುವ ಬಟ್ಟೆ ಕೂಡ ಎಲ್ಲೂ ಸುಕ್ಕಾಗಿರುವುದಿಲ್ಲ.

ಒಂದು ಧಾರಾವಾಹಿಯಲ್ಲಂತೂ ಬೆಂಗಳೂರಿನ ಕೃಷ್ಣರಾಜೇಂದ್ರ ಮಾರುಕಟ್ಟೆಯಲ್ಲಿ ಇಬ್ಬರು ಹೆಣ್ಣು ಮಕ್ಕಳನ್ನು ಅಪಹರಿಸಿ ಇಟ್ಟಿರುತ್ತಾರೆ. ಬೆಂಗಳೂರಿನ ಬಗೆಗೆ ತಿಳಿದವರಿಗೆ ಈ ಸಿಟಿ ಮಾರುಕಟ್ಟೆ ಯಾವಾಗ ಜನ ರಹಿತವಾಗಿರುತ್ತದೆ ಎಂದು ಹೇಳಬೇಕಾಗಿಲ್ಲ. ಇದನ್ನೆಲ್ಲ ಲಘುವಾಗಿ ನೋಡಿದಾಗ ಹಾಸ್ಯಾಸ್ಪದವಾಗಿ ಕಾಣಬಹುದು. ಇನ್ನು ಕೆಲವು ರಿಯಾಲಿಟಿ ಕಾರ್ಯಕ್ರಮಗಳು, ಕಾಮಿಡಿ ಷೋಗಳು ಇವುಗಳಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಗಳು ಬಿದ್ದು ಬಿದ್ದು ನಗುತ್ತಿರುತ್ತಾರೆ. ಅವರನ್ನು ನೋಡಿ ಅಯ್ಯೋ ಎಂದು ನಾವು ನಗಬೇಕು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಎಡವಿದ ಸೀತಾರಾಂ!

ಕಲರ್ಸ್ ಸೂಪರ್‌ನ ಟಿ.ಎನ್. ಸೀತಾರಾಂ 'ಮಗಳು ಜಾನಕಿ' ಚೆನ್ನಾಗಿ ಮೂಡಿಬರುತ್ತಿದೆ. ಈಚೆಗೆ ಐಪಿಎಸ್ ಅಧಿಕಾರಿಯಾದ ಮೈತ್ರಿ ಮಹಾನಂದ ಜಾನಕಿಗೆ ಏನಾದರೂ ಸಾಧನೆ ಮಾಡಬೇಕಾದರೆ ಐಪಿಎಸ್ ಮಾಡಿ ಈಗ ತಾನೇ ಅರ್ಜಿ ಕರೆದಿದ್ದಾರೆ. ಕೆಪಿಎಸ್ಸಿಯಿಂದ ನಾನು ತರಿಸಿಕೊಡ್ತೇನೆ ಎನ್ನುತ್ತಾರೆ.

ನನಗೆ ಗಾಬರಿಯಾಯ್ತು ನಾನು ಕೇಳಿಸಿಕೊಂಡದ್ದೇ ತಪ್ಪಾಗಿರಬಹುದೆಂದು ಅನುಮಾನವೂ ಆಯ್ತು. ಮರುದಿನದ ಕಂತನ್ನು ನೋಡಿದಾಗ ಗಮನವಿಟ್ಟು ನೋಡಿದೆ. ಜಾನಕಿಯನ್ನು ಭೇಟಿ ಮಾಡುವ ಮಧುಕರ್‌ಗೆ ಜಾನಕಿ ಹೇಳುತ್ತಾಳೆ. ಕೆಪಿಎಸ್ಸಿ ಪರೀಕ್ಷೆ ತೆಗೆದುಕೊಂಡರೆ ಕೆಎಎಸ್ ಅಧಿಕಾರಿಯಾಗಬಹುದೇ ವಿನಹ ಐಪಿಎಸ್‌ಅಲ್ಲ. ಯುಪಿಎಸ್ಸಿ ಪರೀಕ್ಷೆಯನ್ನು ಬರೆದು ತೆಗೆದುಕೊಳ್ಳಬೇಕು. ಇಲ್ಲಿ ನಿರ್ದೇಶಕರು ಎಡವಿದ್ದಾರೆ ಎಂದು ಗೊತ್ತಾಗುತ್ತದೆ.